**ದಿನಾಂಕ: 28/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 1 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಜಿ.ಜಿ ವಕೀಲರಿಂದ:**

1. ಮಲ್ಲಪ್ಪ ನವರು ನಮ್ಮ ಊರಿಗೆ ಬಂದು ಎಷ್ಟು ವರ್ಷವಾಯಿತು ಎಂದು ನನಗೆ ಗೊತ್ತಿಲ್ಲ. ಮಲ್ಲಪ್ಪ ನವರ ತಂದೆಯ ಹೆಸರು ಸಣ್ಣಪ್ಪ. ಅವರು ನಿಲವಾಡಿ ಗ್ರಾಮದವರು. ನಮ್ಮ ಊರಿಗೂ ನಿಲವಾಡಿ ಗ್ರಾಮಕ್ಕೂ ಸುಮಾರು 15 ಕಿ.ಮೀ ಅಂತರ ಇದೆ ಎಂದರೆ ಸರಿ. ನಿಲವಾಡಿಯ ಬೇರೆ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ. ಸಣ್ಣಪ್ಪ ನವರು ನಮ್ಮ ಊರಿಗೆ ಬಂದು ನೆಲೆಸಿದರು. ಅವರು ಯಾವ ವರ್ಷದಲ್ಲಿ ಬಂದು ನೆಲೆಸಿದರು ಎಂದು ನನಗೆ ಗೊತ್ತಿಲ್ಲ. ಸಣ್ಣಪ್ಪ ನವರು ಯಾರ ಮಗ ಎಂದು ಗೊತ್ತಿಲ್ಲ. ವಾದಿಯ ತಂದೆಯ ವಂಶವೃಕ್ಷ ನನಗೆ ಗೊತ್ತಿಲ್ಲ. ವಾದಿಯ ತಾತನಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ನನಗೆ ಗೊತ್ತಿರುವಾಗ್ಗೆ ವಾದಿ 40-45 ವರ್ಷಗಳಿಂದ ನಮ್ಮ ಊರಿನಲ್ಲಿ ಇದ್ದಾರೆ.

2. ಸಣ್ಣಪ್ಪ ನವರಿಗೆ ನಿಲವಾಡಿ ಗ್ರಾಮದಲ್ಲಿ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಇದೆ ಮತ್ತು ಅದರ ಚಕ್ಕುಬಂದಿ ಗೊತ್ತಿಲ್ಲ. ವಾದಿ ಎಷ್ಟು ಜನ ಪ್ರತಿವಾದಿಗಳ ವಿರುದ್ಧ ದಾವೆ ಹೂಡಿದ್ದಾರೆಂದು ನನಗೆ ಗೊತ್ತಿಲ್ಲ. ಯಾವ ಪರಿಹಾರಕ್ಕೆ ದಾವೆ ಸಲ್ಲಿಸಿದ್ದಾರೆಂದು ಗೊತ್ತಿಲ್ಲ. ಆವರು ಜಮೀನು ಬರಬೇಕೆಂದು ದಾವೆ ಹೂಡಿದ್ದಾರೆ. ಯಾವ ಸರ್ವೆ ನಂಬರ್ ಗೆ ದಾವೆ ಹೂಡಿದ್ದಾರೆಂದು ಗೊತ್ತಿಲ್ಲ. ನನ್ನ ಪ್ರಮಾಣ ಪತ್ರವನ್ನು ವಾದಿ ಬರೆಸಿಕೊಂಡು ಬಂದಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ವಕೀಲರು ಓದಿ ಹೇಳಿದ್ದಾರೆ. ವಾದಿಯ ತಂದೆ 25 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ದರಕಾಸ್ತಿನಲ್ಲಿ ಆಸ್ತಿ ಮಾಡಿಕೊಂಡರು. ದರಕಾಸ್ತು ಜಮೀನಿನ ಸರ್ವೆ ನಂ. 32. ಅದು ವಾದಿಗೆ ಬಂದಂತಹ ಸ್ವತ್ತು. ವಾದಿ ದುಡ್ಡು ಕೊಟ್ಟು ಜಮೀನು ಪಡೆದಿಲ್ಲ.

3. ಅವರಿವರ ಮನೆಯಲ್ಲಿ ಕೂಲಿ ಕಂಬಳ ಮಾಡಿ ಸ್ನೇಹಿತರ ಮತ್ತು ಹಿತೈಷಿಗಳಿಂದ ಸಾಲ ಪಡೆದು, ಸಣ್ಣಪುಟ್ಟ ವ್ಯಾಪಾರ ಮಾಡಿ ಕೆಲವು ಸ್ವತ್ತುಗಳನ್ನು ಸ್ವಯಾರ್ಜಿತವಾಗಿ

ಸಂಪಾದಿಸಿರುತ್ತಾರೆಂದು ನಾನು ಹೇಳಿ ಬರೆಸಿಲ್ಲ. ವಾದಿ ನಿಲವಾಡಿ ಗ್ರಾಮದಲ್ಲಿ ಯಾವ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಯಾರ ಜೊತೆ ಉಳುಮೆ ಮಾಡುತ್ತಿದ್ದಾರೆಂದು ಗೊತ್ತಿಲ್ಲ. ನಿಲವಾಡಿಗೆ ವಾದಿಯೊಂದಿಗೆ ಎಂದೂ ಹೋಗಿಲ್ಲ. ವಾದಿಗೆ ಸ್ವಂತ ಜಮೀನು ಬೇರೆ ಕಡೆ ಎಲ್ಲಿದೆ ಎಂದು ನಾನು ನೋಡಿಲ್ಲ. ಸಾಕ್ಷಿಯು ಸ್ವತಃ ಸಣ್ಣಪ್ಪ ರವರಿಗೆ ನಿಲವಾಡಿ ಗ್ರಾಮದಲ್ಲಿ ನಮ್ಮ ಜಮೀನಿನ ಪಕ್ಕ ಜಮೀನು ಇದೆ ಎಂದು ನುಡಿಯುತ್ತಾರೆ. ಅದರ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ಗೊತ್ತಿಲ್ಲ. ವಾದಿ ನಿಲವಾಡಿ ಗ್ರಾಮದಿಂದ ದವಸ ಧಾನ್ಯಗಳನ್ನು ತರುತ್ತಿದ್ದರು. ನಾನು ಖುದ್ದಾಗಿ ನೋಡಿದ್ದೇನೆ. ಅವರ ಜಮೀನಿನಲ್ಲಿ ಬೆಳೆದ ಧಾನ್ಯಗಳನ್ನು ತರುತಿದ್ದೆವು ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ಜಮೀನಿನಿಂದ ತರುತಿದ್ದರು ಎಂದು ನಾನು ನೋಡಿಲ್ಲ. ಅವರು ದವಸ ಧಾನ್ಯಗಳನ್ನು ತರುತಿದ್ದುದ್ದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

4. ವಾದಿಗಳಿಗೆ ನಿಲವಾಡಿ ಗ್ರಾಮದಲ್ಲಿ ಯಾರೊಂದಿಗೆ ಸಂಬಂಧ ಇದೆ ಎಂದು ನಾನು ತಿಳಿದುಕೊಂಡಿಲ್ಲ. ವಾದಿ ನಿಲವಾಡಿ ಗ್ರಾಮಸ್ಥನಲ್ಲ, ನನ್ನ ಗ್ರಾಮದವರು ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**